*With Best Compliments From :*

**SRI PARVATHI INDUSTRIES**

**Mfrs. of "SUPREETHA"Utensils Cleaning & Degreasing Powder**

**No. 68/2, 4th Main, Muneshwaranagara,**
**Ullal Main Road, Bangalore - 560 056**
**Ph : 98457 93696, 2679 8481**

***Contact :* H. R. Krishna Kumar**

*With Best Compliments From :*

**YES GEE PHARMA CONSULTANTS**

**Process Know-How & Designers of Chemical Plants**

**Office : KT-35 (89/1), Flat No. 102, 6th Main,**
**16th Cross, Malleswaram, Bangalore - 560 055**
**Tel : (O) 23369718 / 20, (R) 23320024**
**Mobile : 98441 12136 Fax : 091-080-23369720**

*With Best Compliments From :*

**MACHWEL PARTS**

**Manufacturers of Automotive Engine Spares**

**No. 130, 4th Main, 3rd Phase, J. P. Nagar,**
**Bangalore - 560 078.**
**Ph : 26649867**



**ಸಂಕೇತಿ ವಾರ್ತಾ**

ಬೆಟ್ಟದಪುರ ಸಂಕೇತಿ ಸಂಘದ ಮಾಸಪತ್ರಿಕೆ

ಶ್ರೀ ವಿರೋಧಿನಾಮ ಸಂ|| ಭಾದ್ರಪದ ಮಾಸ ಸಂಪುಟ - ೨೪

ಸೆಪ್ಟೆಂಬರ್ ೨೦೦೯ ಸಂಚಿಕೆ - ೦೯

# A creative life

For many of us, the word ‘creativity’ has a wall around it and we are outside this wall. We are under the impression that creativity is for geniuses. Most of us completely lack the confidence in our ability to create. We cling to the belief that we are born creative or non-creative. But creativity is not a special gift of a favoured few.

The capacity to create is inherent in human beings. But the utilisation of that capacity depends upon one’s hard work. It is not hobbies or taking courses or keeping busy. It is sustained effort towards an ideal. When Sir William Herschel, the father of modern astronomy, set out to make the first telescope, the world had ever seen, he first had to learn to grind and polish mirrors. After months of work his first mirror turned out to be imperfect. He made two hundred attempts before he produced a telescope that satisfied him. Thus creativity requires lot of effort and endurance.

If we would live our lives deeply and creatively in whichever field we work, will definitely make us creative.

The work itself may be modest. But if it brings delight, curiosity, and inventiveness, then, we are using the same forces that a genius is using.

Most often, creativity begins in response to things greater than ourselves. On the heels of awareness is the impulse to do something with what we feel and know. Making and doing turn out to be so difficult that we abandon the attempt. We conclude that it is no good and that we are not that creative. In fact it takes an enlightened stubbornness to produce everything.

The great and transforming truth is that being creative is a discovery of ourselves, of our own way of responding to life. It is something one does alone.

## *Change of Address*

**B. C. Nagaraja**
**Anasuya**
Flat No. 209, "Shravanthi Gokul", No. 22, 5th Cross,
Dwaraka Nagar, BSK 3rd Stage,
Bangalore - 560 085
Ph : 97405 09385, 97413 95111







# ಅಧ್ಯಕ್ಷ ನುಡಿ

ಸಂಕೇತಿ ಬಾಂಧವರ ಹಿರಿಮೆ ಅಗಾಧವೂ, ವೈವಿಧ್ಯಮಯವೂ ಆಗಿದೆಯೆನ್ನುವುದಕ್ಕೆ ಇತ್ತೀಚೆಗೆ ಕನ್ನಡದ ಜನಪ್ರಿಯ ದೈನಿಕಗಳಲ್ಲಿ ಒಂದಾದ 'ವಿಜಯ ಕರ್ನಾಟಕ'ದಲ್ಲಿ ಉಲ್ಲೇಖಿಸಲ್ಪಟ್ಟಿರುವ ಬಾಂಧವರಾದ ಶ್ರೀಯುತ ಎಸ್.ಎನ್. ಬಾಲಗಂಗಾಧರ (ಮುಖಪುಟ) ಅವರೇ ಸಾಕ್ಷಿ. ಸುದೀರ್ಘ ಲೇಖನದಲ್ಲಿ ಸಂಪಾದಕ ಶ್ರೀ ವಿಶ್ವೇಶ್ವರ ಭಟ್ ಅವರು ಬೆಲ್ಜಿಯಂನ ಪ್ರತಿಷ್ಠಿತ ಗೆಂಟ್ ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿರುವ ನಮ್ಮೆಲ್ಲರ ಹೆಮ್ಮೆಯ ಬಾಂಧವರಾದ ಶ್ರೀ ಎಸ್. ಎನ್. ಬಾಲಗಂಗಾಧರ ಅವರ ವಿದ್ವತ್ತು, ಸ್ನೇಹಪರತೆ, ಕ್ರಿಯಾಶೀಲತೆ, ಅದಮ್ಯ ಉತ್ಸಾಹ, ಮಾರ್ಗದರ್ಶಕತ್ವಗಳ ಗುಣಗಾನ ಮಾಡಿದ್ದಾರೆ. ತತ್ವಶಾಸ್ತ್ರದ ಅದರಲ್ಲೂ ಭಾರತೀಯ ಮೀಮಾಂಸೆಗಳ ಬಗ್ಗೆ ವಿಶ್ವಾದ್ಯಂತ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವಂತೆ ಪ್ರೇರಣೆ ನೀಡುತ್ತಿರುವ ಶ್ರೀಯುತರ ಬಗ್ಗೆ ನಾವೆಲ್ಲ ಹೆಮ್ಮೆಯಿಂದ ಬೀಗಬಹುದಾದ ವಿಷಯ. ಜತೆಯಲ್ಲಿಯೇ ನಾವುಗಳು ಇಲ್ಲಿಯೇ ಇದ್ದುಕೊಂಡು ಇಂತಹ ಸಂಗತಿಗಳ ಬಗ್ಗೆ ಏಕೆ ತಲೆಕೆಡಿಸಿಕೊಳ್ಳುತ್ತಿಲ್ಲ ಎಂದೂ ಯೋಚಿಸಬೇಕಾಗಿದೆ. ಶ್ರೀಯುತರು ದಿ|| ಎಸ್.ಜಿ. ನಾರಾಯಣರಾವ್ ಮತ್ತು ದಿ|| ಸಾವಿತ್ರಮ್ಮ ಅವರ ಸುಪುತ್ರರು. ಶ್ರೀ ಬಾಲಗಂಗಾಧರ ಅವರಿಗೆ ಹಾರ್ದಿಕ ಅಭಿನಂದನೆಗಳು.

ಸಂಘದ ಕಾರ್ಯಗಳಿಗೆ ಇಂಬುಕೊಡುವ ಕೊಡುಗೆಗಳು ಬಂದಿವೆ. ಬಾಂಧವರಾದ ಶ್ರೀ ರಾಮಚಂದ್ರ ಅವರು ಮಗಳ ಮದುವೆಯ ಸಂದರ್ಭದಲ್ಲಿ ಸಭಾ ತಾಂಬೂಲವೆಂದು ರೂ. 2000/- ಕೊಡುಗೆಯನ್ನು ಸಂಘಕ್ಕೆ ನೀಡಿದ್ದಾರೆ. ಹಾಗೆಯೇ ಶ್ರೀ ಆರ್. ಕೆ. ಚಂದ್ರಹಾಸ ಅವರ ಸುಪುತ್ರರಾದ ಶ್ರೀ ಆರ್. ಸಿ. ಸುಚೀಂದ್ರ ಅವರು ವೃದ್ಧಾಶ್ರಮಕ್ಕಾಗಿ ರೂ. 10,000/- ಕೊಡುಗೆ ಕೊಟ್ಟಿದ್ದಾರೆ. ಈರ್ವರಿಗೂ ಸಂಘದ ಅನಂತ ಕೃತಜ್ಞತೆಗಳು.

– ಎಂ. ನರಸಿಂಹನ್



# ಕಾರ್ಯದರ್ಶಿ ಕಾಲಂ

ಪ್ರಿಯ ಸಂಕೇತಿ ಬಂಧುಗಳೆ, ಎಲ್ಲರಿಗೂ ನವರಾತ್ರಿಯ ಹಾರ್ದಿಕ ಶುಭಾಶಯಗಳು.

''ಆನೋ ಭದ್ರಾಃ ಕ್ರತವೋಯನ್ತು ವಿಶ್ವತಃ'' ಸುವಿಚಾರಗಳು ನಮಗೆ ಎಲ್ಲೆಡೆಯಿಂದಲೂ ಹರಿದುಬರಲಿ'' ಎಂಬುದು ಆರ್ಯೋಕ್ತಿ. ಯಾವುದೇ ಒಂದು ಒಳ್ಳೆಯ ದೊಡ್ಡ ಕೆಲಸ ಮಾಡಬೇಕಾದರೆ, ಅದಕ್ಕೆ ಸಂಬಂಧಿಸಿದ ಎಲ್ಲರೂ, ಎಂಥಾ ಭಿನ್ನಮತವಿದ್ದರೂ, ಅದರ ಸಾಧಕ ಬಾಧಕಗಳನ್ನು ಕೂಲಂಕುಶವಾಗಿ ಚರ್ಚಿಸಿ, ವ್ಯಕ್ತಿಗತವಾದ ಭಾವನೆಗಳನ್ನು ಬದಿಗಿರಿಸಿ, ಸಮಸ್ತರಿಗೂ, ಸಮಾಜಕ್ಕೂ ಒಳ್ಳೆಯದಾಗುವಂಥಾ ತೀರ್ಮಾನವನ್ನು ತೆಗೆದುಕೊಂಡು, ಒಮ್ಮತದಿಂದ ಆ ಕಾರ್ಯವನ್ನು ಆಗುಗೊಳಿಸಬೇಕು ಎಂಬುದೇ ನಮ್ಮ ಸಮಿತಿಯ ನಂಬಿಕೆ.

ಈಗಾಗಲೇ ನಾನು ನಮ್ಮ ವಿದ್ಯಾರ್ಥಿನಿಲಯದ ಸಭಾಂಗಣದ ಬಗ್ಗೆ ಬರೆಯುತ್ತಿದ್ದೇನೆಂದು ನಿಮಗೆ ಅರ್ಥವಾಗಿರಬೇಕು.

ಒಂದು ಆಧುನಿಕ ಸಭಾಂಗಣವಾಗಬೇಕೆಂಬುದು ನಮ್ಮೆಲ್ಲರ ಆಸೆ. ಇದರ ಬಗ್ಗೆ ಸಾಕಷ್ಟು ಚರ್ಚೆಯೂ ಆಗಿದೆ. ಹಲವಾರು ಸ್ಪಷ್ಟೀಕರಣಗಳನ್ನು ನೀಡಿಯೂ ಆಗಿದೆ. ಆದರೂ ಕೆಲವರು ಮತ್ತು ಕೆಲವು ಅನುಮಾನಗಳನ್ನು ವ್ಯಕ್ತಪಡಿಸುತ್ತಲೇ ಇದ್ದಾರೆ. ನಾನು ಆಗಲೇ ಹೇಳಿದಂತೆ ಎಲ್ಲರೂ ಸೇರಿ ಒಮ್ಮನಸ್ಸಿನಿಂದಲೇ ಈ ಕೆಲಸವನ್ನು ಮಾಡಬೇಕೆಂಬ ಆಸೆ ಇರುವುದರಿಂದ ನಾನೂ ಮತ್ತೆ ಮತ್ತೆ ಅದರ ಬಗ್ಗೆ ಬರೆಯುತ್ತಲೇ ಇರುತ್ತೇನೆ.

ಈ ಬಾರಿ ಕಾನೂನು ವ್ಯವಹಾರಗಳ ಬಗ್ಗೆ ನಮ್ಮ ಮಾಜಿ ಜಂಟಿ ಕಾರ್ಯದರ್ಶಿ ಶ್ರೀ ಹೆಚ್. ಎನ್. ಸುರೇಶ್‌ರವರ ಬಳಿ ಕೆಲವರು ಕೆಲವು ಅನುಮಾನಗಳನ್ನು ವ್ಯಕ್ತಪಡಿಸಿರುತ್ತಾರೆ. ಈ ದಿಶೆಯಲ್ಲಿ ನಾವೀಗಾಗಲೇ ನಮ್ಮ ಸಂಕೇತಿ ಬಂಧುಗಳೇ ಆದ ಅಡ್ವೋಕೇಟ್ ಬಿ. ಕೆ. ಚಂದ್ರಶೇಖರರವಲ್ಲಿ ಹಲವಾರು ಬಾರಿ ಈ ಬಗ್ಗೆ ಚರ್ಚೆ ಮಾಡಿ, ಯಾವರೀತಿ ಮುಂದುವಿರಯಬೇಕೆಂಬ ಬಗ್ಗೆ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಇದೆಲ್ಲವನ್ನೂ ವಿಷದವಾಗಿ ಇಲ್ಲಿ ಬರೆಯಲಾಗದ ಕಾರಣ, ಆಸಕ್ತಿಯುಳ್ಳವರು, ನನ್ನನ್ನಾಗಲೀ, ಅಧ್ಯಕ್ಷರನ್ನಾಗಲೀ ಅಥವಾ ನಮ್ಮ ಖಜಾಂಚಿಯನ್ನಾಗಲೀ





ಸಂಪರ್ಕಿಸಬಹುದು. ಕಾನೂನಿನ ತೊಡಕುಗಳ ಬಗ್ಗೆ ನಮಗೂ ಸಾಕಷ್ಟು ಕಾಳಜಿ ಇದ್ದು ಸಾಕಷ್ಟು ವಿಷಯಗಳನ್ನು ಸಂಗ್ರಹಿಸಿರುತ್ತೇವೆ. ಆದರೂ ಇಂಥ ವಿಷಯಗಳ ಬಗ್ಗೆ ಸಾಕಷ್ಟು ಆಸಕ್ತಿವಹಿಸಿ, ನಾವು ಸರಿಯಾದ ಮಾರ್ಗದಲ್ಲಿ ನಡೆಯುವಂತೆ ಮಾಡುತ್ತಿರುವ ನಮ್ಮ ಸಂಕೇತಿ ಬಂಧುಗಳ ಬಗ್ಗೆ ನಮಗೆಲ್ಲರಿಗೂ ಅತ್ಯಂತ ಹೆಮ್ಮೆ ಮತ್ತು ಅಭಿಮಾನ.

ತಾವೆಲ್ಲರೂ ಇದೇರೀತಿ ಸಂಘದ ಮೇಲೆ ಅಭಿಮಾನವಿರಿಸಿ, ಈ ಸಭಾಂಗಣದ ಮಹತ್ಕಾರ್ಯವನ್ನು ಆಗುವಂತೆ ಮಾಡಿಸಿಕೊಡಬೇಕೆಂದು ನಮ್ಮ ಸಮಿತಿಯ ಪರವಾಗಿ ವಿನಮ್ರವಾಗಿ ಕೇಳಿಕೊಳ್ಳುತ್ತೇನೆ.

- ಎಸ್. ಸಿ. ಮಂಜುನಾಥ್



## ಪ್ರಶಸ್ತಿ

ತಾ|| 11.09.09ರಂದು ನಡೆದ ಕೃಷ್ಣ ಜಯಂತಿಯ ಸಂದರ್ಭದಲ್ಲಿ ಉಡುಪಿ ಪರ್ಯಾಯ ಪೀಠದ ಗುರುಗಳಾದ ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದಂಗಳವರು ಗಾನಕಲಾ ಭೂಷಣ ಆರ್. ಕೆ. ಪದ್ಮನಾಭ ಅವರಿಗೆ ''ಆಸ್ಥಾನ ವಿದ್ವಾಂಸ'' ಎಂಬ ಪ್ರಶಸ್ತಿಯನ್ನು ನೀಡಿ ಆಶೀರ್ವದಿಸಿರುತ್ತಾರೆ.

## Artistic Panel Required

For the long podium portion of the wall of the **Old Age Home** under completion at Vajarahalli, Bangalore, it is proposed to have some artistic panel to be put either in Cement or any other material. Artists in our community may send proposals at the earliest to the President. They are welcome to visit the site any time, on intimation

# ಬೆಟ್ಟದಪುರ ಸಂಕೇತಿ ಸಂಘ (ರಿ.)

ನಂ. 81, 12ನೇ ಮುಖ್ಯರಸ್ತೆ ಬಿ.ಎಸ್.ಕೆ. 2ನೇ ಹಂತ, ಬೆಂಗಳೂರು – 560 070

## ಸಾಲರೂಪದ ವಿದ್ಯಾರ್ಥಿವೇತನದ ಅರ್ಜಿ ಪತ್ರ
## (B.E., M.B.B.S., C.A., Ph.D., M.B.A.)

**2009 - 2010**

Photo

ಕ್ರಮ ಸಂಖ್ಯೆ :

ಸೂಚನೆ : ವಿದ್ಯಾರ್ಥಿ/ನಿಯ ತಂದೆ / ತಾಯಿ ಅಥವಾ ಪೋಷಕರು ಸಂಘದ ಆಜೀವ ಸದಸ್ಯರಾಗಿರಬೇಕು.

1. ಅಭ್ಯರ್ಥಿಯ
   - ಅ. ಹೆಸರು
   - ಆ. ವಯಸ್ಸು
   - ಇ. ವಿಳಾಸ

2. ತಂದೆ / ತಾಯಿ / ಪೋಷಕರ
   - ಅ. ಹೆಸರು
   - ಆ. ವಿಳಾಸ
   - ಇ. ಉದ್ಯೋಗ
   - ಈ. ವಾರ್ಷಿಕ ವರಮಾನ
   - ಉ. ಸರ್ಟಿಫಿಕೇಟ್ ಲಗತ್ತಿಸಿದೆಯೇ ?
   - ಊ. ಸಂಘದ ಆಜೀವ ಸದಸ್ಯರಾಗಿದ್ದಾರೆಯೇ ?

3. ವಿದ್ಯಾರ್ಥಿ/ನಿ ವ್ಯಾಸಂಗ ಮಾಡುತ್ತಿರುವ
   - ಅ. ತರಗತಿ
   - ಆ. ಶಾಲೆ/ಕಾಲೇಜು

4. ಅಭ್ಯರ್ಥಿಗೆ ಕಳೆದ ಸಾಲಿನಲ್ಲಿ ಸಂಘದಿಂದ ವಿದ್ಯಾರ್ಥಿ ವೇತನ ಕೊಟ್ಟಿದೆಯೇ ?

5. ಅಭ್ಯರ್ಥಿಯು ಎಷ್ಟು ವರ್ಷಗಳಿಂದ ವಿದ್ಯಾರ್ಥಿ ವೇತನವನ್ನು ಪಡೆದಿರುತ್ತಾನೆ/ಳೆ ?





6. ಸಂಘದ ಸ್ಥಳೀಯ ಪ್ರತಿನಿಧಿಯ ಶಿಫಾರಸ್ಸು ಮತ್ತು ಸಹಿ

7. ಶಾಲೆ/ಕಾಲೇಜುಗಳ ಮುಖ್ಯೋಪಾಧ್ಯಾಯರ/ ಪ್ರಿನ್ಸಿಪಾಲರ ಸರ್ಟಿಫಿಕೇಟ್ ಲಗತ್ತಿಸಿದೆಯೇ ?

8. ಅಭ್ಯರ್ಥಿಯು ತೇರ್ಗಡೆ ಹೊಂದಿದ ಹಿಂದಿನ ಪರೀಕ್ಷೆಯ ಅಂಕಪತ್ರ ಲಗತ್ತಿಸಿದೆಯೇ ?

9. ಇತರ ವಿವರಗಳು : ಉದ್ಯೋಗದಲ್ಲಿರುವ ಸಹೋದರರು.

10. ವಿದ್ಯಾಭ್ಯಾಸ ಮಾಡುತ್ತಿರುವ ಸಹೋದರರು

ಮೇಲ್ಕಂಡ ವಿವರಗಳು ನನಗೆ ತಿಳಿದ ಮಟ್ಟಿಗೆ ಸತ್ಯವಾಗಿದೆಯೆಂದು ಹೇಳುತ್ತೇನೆ.

**ತಂದೆ/ತಾಯಿ/ಪೋಷಕರ ಸಹಿ** **ಅಭ್ಯರ್ಥಿಯ ಸಹಿ**

**ಸ್ಥಳ :** **ತಾ॥**

ಸಂಘದ ವಿದ್ಯಾರ್ಥಿ ವೇತನ ಯೋಜನೆಯ ನಿಯಮ ನಿಬಂಧನೆಗಳಿಗೆ ನಾನು ಒಪ್ಪಿರುತ್ತೇನೆ ಮತ್ತು ನನ್ನ ವಿದ್ಯಾಭ್ಯಾಸ ಪೂರ್ಣಗೊಂಡು ನಾನು ಉದ್ಯೋಗವನ್ನು ಕೈಗೊಂಡ ನಂತರ ಸಂಘದ ವಿದ್ಯಾರ್ಥಿವೇತನ ನಿಧಿಗೆ ನನ್ನ ಶಕ್ತಿ ಸಾಮರ್ಥ್ಯಕ್ಕನುಗುಣವಾಗಿ ಸಹಾಯವನ್ನು ಮಾಡುತ್ತೇನೆ.

ಸ್ಥಳ : ಅಭ್ಯರ್ಥಿಯ ಸಹಿ

### ಕಾರ್ಯಾಲಯದ ದಾಖಲೆಗೆ

1. ಅರ್ಜಿಪತ್ರ ಸಂಘಕ್ಕೆ ತಲುಪಿದ ತಾರೀಖು..................................
2. ಕಾರ್ಯಕಾರಿ ಸಮಿತಿಯ ತಾ॥..................ನ ಸಭೆಯಲ್ಲಿ ಅರ್ಜಿಯನ್ನು ಮಂಜೂರು ಮಾಡಲಾಗಿದೆ.
3. ವಿದ್ಯಾರ್ಥಿವೇತನವನ್ನು ಅಭ್ಯರ್ಥಿಗೆ ತಾ॥........................... ರಂದು .................................................... ಮೂಲಕ ಕಳುಹಿಸಿದೆ.

**ಅರ್ಜಿ ಕಳುಹಿಸಲು ಕೊನೆಯ ದಿನಾಂಕ 25-10-2009** **ಗೌ॥ ಕಾರ್ಯದರ್ಶಿ**

## ಶುಭ ಸಮಾಚಾರಗಳು

### ಗೃಹಪ್ರವೇಶ :

| ತಾರೀಖು | |
|---|---|
| 04.09.09 | **ಕಾರ್ತಿಕ್. ಬಿ. ಎನ್. ಮತ್ತು ಮುಕ್ತ** |
| ಬೆಂಗಳೂರು | ದ್ವಾರಕಾನಗರ |

### ಉಪನಯನ :

| ತಾರೀಖು | ವಟು |
|---|---|
| 31.07.09 | **ಚಿ|| ರೋಹಿತ್ ಜೋಯಿಸ್** |
| ಬೆಂಗಳೂರು | (ಶ್ರೀಮತಿ ಅನ್ನಪೂರ್ಣಮ್ಮ ಮತ್ತು ಶ್ರೀ ವೆಂಕಟರಾಮ್ ಜೋಯಿಸ್ ಅವರ ಪ್ರಪೌತ್ರ) |

### ವಿವಾಹ ಮಹೋತ್ಸವ :

| ತಾರೀಖು | ವರ | ವಧು |
|---|---|---|
| 26.08.09 | **ಚಿ||ರಾ|| ಅರವಿಂದ್** | **ಹ||ಕುಂ||ಶೋ|| ಅನುಪಮಾ** |
| ಬೆಂಗಳೂರು | (ಶ್ರೀಮತಿ ಲೀಲಾ ಮತ್ತು ಶ್ರೀ ರಾಮಮೋಹನ್ ಅವರ ಪುತ್ರ) | (ಶ್ರೀಮತಿ ಉಮಾ ಮತ್ತು ಶ್ರೀ ಎಸ್.ಎನ್. ರಾಮಚಂದ್ರ (ಚೆನ್ನೈ) ಇವರ ಪುತ್ರಿ ) |
| 02.09.09 | **ಚಿ||ರಾ|| ಕಾರ್ತಿಕ್** | **ಹ||ಕುಂ||ಶೋ|| ಮುಕ್ತಾ** |
| ಬೆಂಗಳೂರು | (ಶ್ರೀಮತಿ ಅನಸೂಯ ಮತ್ತು ಶ್ರೀ ನಾಗರಾಜ. ಬಿ. ಸಿ. ಅವರ ಪುತ್ರ) | ಶ್ರೀಮತಿ ರಾಜಶ್ರೀ ಮತ್ತು ಶ್ರೀ ಶಶಿಕುಮಾರ ಅವರ ಪುತ್ರಿ) |

### ಹುಟ್ಟುಹಬ್ಬ :

| ತಾರೀಖು | |
|---|---|
| 19.07.09 | **ಚಿ|| ರೋಹನ್** |
| ಬೆಂಗಳೂರು | (ಶ್ರೀಮತಿ ಅಶ್ವಿನಿ ಮತ್ತು ಡಾ|| ವಿನೋದ್ ಬಿ. ಜಿ. (ಲಂಡನ್) ಅವರ ಪುತ್ರ ಹಾಗೂ ಶ್ರೀಮತಿ ಸರೋಜ ಮತ್ತು ದಿ|| ಗುರುರಾಜ್ ಬಿ. ಆರ್. ಅವರ ಪೌತ್ರ ಹಾಗೂ ಶ್ರೀಮತಿ ಕೌಸಲ್ಯಾಬಾಯಿ ಮತ್ತು ದಿ|| ರಾಜಾರಾಮ್. ಎಸ್. ಅವರ ಪ್ರಪೌತ್ರ) |





| ತಾರೀಖು | |
|---|---|
| 02.09.09 | **ಚಿ|| ಅತ್ರಿ** |
| ಮೈಸೂರು | (ಶ್ರೀಮತಿ ಪೂಜಾ ಮತ್ತು ಶ್ರೀ ಬಿ.ಎನ್. ಕಿರಣ್ ಅವರ ಪುತ್ರ ಹಾಗೂ ದಿ|| ಪ್ರೇಮಾ ಮತ್ತು ಶ್ರೀ ಬಿ.ಎನ್.ನರಸಿಂಹಮೂರ್ತಿ ಅವರ ಪೌತ್ರ) |

### ಆಗಸ್ಟ್ ತಿಂಗಳಲ್ಲಿ ಸಂಘಕ್ಕೆ ಬಂದ ಕೊಡುಗೆಗಳು

### ಆಜೀವ ಸದಸ್ಯತ್ವ (ರೂ. 100/-)

| ಹೆಸರು | ಊರು | ರ. ನಂ. | ಆ.ಸ.ಸಂ. |
|---|---|---|---|
| ಶರತ್ ಆರ್. ಎಸ್. | ಬೆಂಗಳೂರು | 7773 | 2069 |
| ಸುಪ್ರಭಾ ಶರತ್ | ಬೆಂಗಳೂರು | 7774 | 2070 |
| ಎಸ್. ಎಸ್. ಶ್ರೀಧರ್ | ಬೆಂಗಳೂರು | 7781 | 2071 |
| ಸಂಧ್ಯಾ. ಎಫ್. ಎಸ್. | ಮೈಸೂರು | 7782 | 2072 |
| ಚಂಪಾ | ಮೈಸೂರು | 7783 | 2073 |

### ಸಭಾ ತಾಂಬೂಲಗಳು :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಎಸ್.ಎನ್. ರಾಮಚಂದ್ರ | ಚೆನ್ನೈ | 7784 | 2000.00 (ಮಗಳ ಮದುವೆ) |
| ಡಾ|| ಬಿ. ಜಿ. ವಿನೋದ್ | ಲಂಡನ್ | 7785 | 101.00 (ಮಗನ ಹುಟ್ಟುಹಬ್ಬ) |
| ಬಿ. ಸಿ. ನಾಗರಾಜ | ಬೆಂಗಳೂರು | 7787 | 501.00 (ಮಗನ ಮದುವೆ) |
| ಕಾರ್ತಿಕ್ ಬಿ. ಎನ್. | ಬೆಂಗಳೂರು | 7788 | 202.00 (ಗೃಹಪ್ರವೇಶ) |
| ಹನ್ಸ್‌ಶಾಸ್ತ್ರಿ ಜಯಶ್ರೀ ಶಾಸ್ತ್ರೀ | ಯುಎಸ್ಎ | 7789 | US$ 100.00 (ಮಗಳ ಮದುವೆ) |

## ವಿದ್ಯಾರ್ಥಿ ವೇತನ ನಿಧಿ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಆರ್. ಎಸ್. ಜಯಶ್ರೀ | ಬೆಂಗಳೂರು | 7777 | 4000.00 |

## ವಾರ್ತಾ ಜಾಹೀರಾತು / ಫಂಡ್ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಲೋಟಸ್ ಕಂಟ್ರೋಲ್ಸ್ | ಬೆಂಗಳೂರು | 7776 | 2400.00 |

## ವೃದ್ಧಾಶ್ರಮ ಫಂಡ್ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಬಿ. ಆರ್. ದ್ವಾರಕಾನಾಥ | ಬೆಂಗಳೂರು | 7779 | 1,00,000.00 (ಪಿತೃಗಳ ನೆನಪಿನಲ್ಲಿ) |
| ಆರ್. ಸಿ. ಸುಚೀಂದ್ರ | ಬೆಂಗಳೂರು | 7786 | 10,000.00 (ಅಜ್ಜ- ಅಜ್ಜಿಯರ ನೆನಪಿನಲ್ಲಿ) |

## ಆಗಸ್ಟ್ ತಿಂಗಳಲ್ಲಿ ನಡೆದ ಹಾಸ್ಟೆಲ್ ಅನ್ನದಾನ ಸೇವಾ :

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| **27.06.09 ಬೆಂಗಳೂರು** | **ಸತ್ಯವತಿ ರಾಮಶೇಷನ್** | **ತಾಯಿ ಕಮಲಾಬಾಯಿ** |
| 02.08.09 ಬೆಂಗಳೂರು | ಮೂರ್ತಿ ಕೆ.ಎನ್.ಕೆ. | ಕಟ್ಟೇಪುರ ನಾರಾಯಣ ರಾವ್ ಮತ್ತು ಸಾವಿತ್ರಮ್ಮ |
| 05.08.09 ಬೆಂಗಳೂರು | ಕಮಲಾ ಪರಶುರಾಮ ರಾವ್ | ತಂದೆ ಕೋಳೂರು ರಾಮಸ್ವಾಮಿ |
| 05.08.09 ಬೆಂಗಳೂರು | ವೆಂಕಟರಾಮಯ್ಯ ಬಿ. ಎಸ್. | ಅಜ್ಜಿ ಪುಟ್ಟಲಕ್ಷಮ್ಮ |
| 05.08.09 ಬೆಂಗಳೂರು | ವೆಂಕಟರಾಮಯ್ಯ ಬಿ. ಎಸ್. | ತಾಯಿ ಭಾಗೀರಥಿ |





| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 05.08.09 ಬೆಂಗಳೂರು | ಡಾ|| ವಿಶ್ವೇಶ್ವರಯ್ಯ ಆರ್.ಎನ್. | ತಾಯಿ ಸಾವಿತ್ರಮ್ಮ |
| 06.08.09 ಬೆಂಗಳೂರು | ಗೋದಾವರಿ ಬಾಯಿ ಛಾರಿಟಬಲ್ ಟ್ರಸ್ಟ್ | ತಾಯಿ ಗೋದಾವರಿ ಬಾಯಿ |
| 07.08.09 ಬೆಂಗಳೂರು | ಅನಸೂಯಾ ರಾವ್ | ಪತಿ ಬಿ.ವಿ.ಆರ್.ರಾವ್ |
| 08.08.09 ಯುಎಸ್ಎ | ವೈದೇಹಿ, ಶಿವಶಂಕರ್ | ಪುತ್ರ ರಾಂ ಶಿವಶಂಕರ್ |
| 10.08.09 ಬೆಂಗಳೂರು | ಶಕುಂತಲಾ ವೆಂಕಟಕೃಷ್ಣಪ್ಪ | ಸಣ್ಣಮ್ಮ (ಪಿತಾಮಹಿ) |
| 10.08.09 ಬೆಂಗಳೂರು | ಶ್ರೀನಿವಾಸಯ್ಯ, | ತಾಯಿ ಪಾರ್ವತಮ್ಮ |
| 11.08.09 ಬೆಂಗಳೂರು | ಕಪಾಲೇಶ್ವರ್ | ತಂದೆ ಹೆಚ್. ಎಸ್. ಶಿವಶಂಕರ್ |
| 12.08.09 ಬಾಂಬೆ | ಕೃಷ್ಣಮೂರ್ತಿ ಆರ್. ವಿ. | ಕಿರಿಯ ಸಹೋದರಿ ಅನ್ನಪೂರ್ಣ |
| 13.08.09 ಬೆಂಗಳೂರು | ರವಿಕುಮಾರ್ ಆರ್ ಮತ್ತು ಸಹೋದರರು ಹಾಗೂ ಸಹೋದರಿಯರು | ತಂದೆ ರಾಮರಾವ್ ಆರ್. ಕೆ. |
| 15.08.09 ಬೆಂಗಳೂರು | ಶ್ರೀನಿವಾಸ ರಾವ್. ಬಿ.ಎಸ್. | ತಾಯಿ ಲಕ್ಷಮ್ಮ |
| 17.08.09 ಮೈಸೂರು | ಲಕ್ಷ್ಮಿ ದೊರೆಸ್ವಾಮಿ | ಪತಿ ಆರ್. ಎನ್. ದೊರೆಸ್ವಾಮಿ |
| 17.08.09 ಬಾಂಬೆ | ವಿಮಲಾ ದೀಕ್ಷಿತ್ | ಪತಿಯ ಹುಟ್ಟುಹಬ್ಬ |

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 18.08.09<br>ಬೆಂಗಳೂರು | ರಾಮಸ್ವಾಮಿ ಬಿ.ಟಿ. | ಕಿರಿಯ ಸಹೋದರಿ ಶಾಂತಮ್ಮ |
| 19.08.09<br>ಬೆಂಗಳೂರು | ಪ್ರಭಾಕರ್ ಹೆಚ್.ಎಸ್. | ತಾಯಿ ಹೆಚ್. ವಿ. ಸೀತಮ್ಮ |
| 20.08.09<br>ಬಾಂಬೆ | ಕೃಷ್ಣಮೂರ್ತಿ ಆರ್.ವಿ. | ಅತ್ತೆ ಸಾಲಿಗ್ರಾಮ ಸಾವಿತ್ರಮ್ಮ ಸುಬ್ಬಯ್ಯ |
| 21.08.09<br>ಬೆಂಗಳೂರು | ನರಸಿಂಹದತ್ತ ಎನ್. | ಬಿ.ಎಸ್.ಗೋವಿಂದರಾಜು (ಮಾತಾಮಹ) |
| 22.08.09<br>ಬೆಂಗಳೂರು | ನಾಗರಾಜ್ ಹೆಚ್.ಎನ್. | ಪತ್ನಿ ಬಿ.ಎನ್.ರಮಾಮಣಿ |
| 23.08.09<br>ಬೆಂಗಳೂರು | ರಾಮಚಂದ್ರ. ಬಿ. ಎಸ್. | ತಂದೆ ಬಿ. ಶ್ರೀನಿವಾಸ ಮೂರ್ತಿ |
| 23.08.09<br>ಬೆಂಗಳೂರು | ರಾಮಸ್ವಾಮಿ ಆರ್. ಸಿ. | ತಂದೆ ಚನ್ನಕೇಶವಯ್ಯ |
| 23.08.09<br>ಬೆಂಗಳೂರು | ಸಾವಿತ್ರಿ ವಿಶ್ವನಾಥ್ | ತಂದೆ ಎಸ್.ಎ. ಶಾಮಣ್ಣಯ್ಯ |
| 23.08.09<br>ನಂಜನಗೂಡು | ಸೀತಾಲಕ್ಷಮ್ಮ | ಪತಿ ಕೆ. ಟಿ. ಸುಬ್ರಹ್ಮಣ್ಯ |
| 23.08.09<br>ಹೊಸಕೋಟೆ | ಶ್ರೀನಿವಾಸನ್ ಹೆಚ್. ಎಸ್. | ಅಜ್ಜ ಕೋಳೂರು ಸುಬ್ಬಣ್ಣ |
| 23.08.09<br>ಬೆಂಗಳೂರು | ಸುಬ್ರಹ್ಮಣ್ಯ ಬಿ.ಎನ್.ವಿ. | ತಾಯಿ ಕಾವೇರಮ್ಮ |
| 23.08.09<br>ಬೆಂಗಳೂರು | ಉಮಾ ಶ್ರೀನಿವಾಸನ್ | ತಾಯಿ ಲಕ್ಷ್ಮೀರಾವ್ |
| 24.08.09<br>ಬೆಂಗಳೂರು | ಅರುಣ್ ಸಾಲಿಗ್ರಾಮ್,<br>ಕಿರಣ್ ಸಾಲಿಗ್ರಾಮ್ | ತಾಯಿ ಗಾಯತ್ರಿ ಮೂರ್ತಿ |





| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 24.08.09<br>ಬೆಂಗಳೂರು | ಡಾ॥ ಮೋಹನ್ ರಾಮ್ ಎಸ್. | ಹಿರಿಯ ಪುತ್ರ ಆನಂದ್ ಕುಮಾರ್ |
| 25.08.09<br>ಬೆಂಗಳೂರು | ಮಾಯಾ ಹೆಚ್.ವಿ. | |
| 27.08.09<br>ಬೆಂಗಳೂರು | ಮಾಲತಿ ಎಸ್. ನಾರಾಯಣ್<br>ಶ್ರೀಹರಿ ಶ್ರೀ ಕುಮಾರ್ | ತಾಯಿ ಸರೋಜಾ ಎನ್. ಸ್ವಾಮಿ |
| 28.08.09<br>ಮೈಸೂರು | ಕೇಶವ ಮೂರ್ತಿ ಹರವೆ | ತಂದೆ ಹರವೆ ಶಾನುಭೋಗ್ ನಾರಣಯ್ಯ |
| 28.08.09<br>ಬೆಂಗಳೂರು | ಸೋಮಶೇಖರ್ ಆರ್.ಎನ್. | ತಾಯಿ ಸುಬ್ಬಲಕ್ಷಮ್ಮ |
| 28.08.09<br>ಬೆಂಗಳೂರು | ಶ್ರೀನಿವಾಸಯ್ಯ ಬಿ. ವಿ. ಮತ್ತು<br>ಬಿ.ವಿ.ವಿ. ಸುಬ್ರಹ್ಮಣ್ಯ | ತಂದೆ ಬಿ. ಎಸ್. ವೆಂಕಟರಾಮಯ್ಯ |
| 29.08.09<br>ಬೆಂಗಳೂರು | ರುಕ್ಮಿಣಿ ನಾಗರಾಜರಾವ್ | ಪತಿ ನಾಗರಾಜರಾವ್ |
| 31.08.09<br>ಸಿಂಗಪೂರ್ | ಪ್ರಭಾ ಶೇಖರ್ | ಪತಿ ಹೆಚ್. ಕೆ. ಚಂದ್ರಶೇಖರ್ |
| 31.08.09<br>ಮೈಸೂರು | ರಾಜನ್. ಎಸ್. | ತಾಯಿ ಸಾವಿತ್ರಮ್ಮ |

## *Change of Address*

**H. R. Krishna Kumar**
**Shylaja**

No. G4/149, "Habitat Heights", Temple Street,
ITI Layout, Kathriguppe Main Road, BSK 3rd Stage,
Bangalore - 560 085
Ph : 2679 8481

## ಪ್ರತಿಭೆ

### ಕು|| ಆರ್. ಸಂಗೀತಾ ತಾರಾನಾಥನ್

**ಬಿ. ಮ್ಯೂಸಿಕ್ ಪರೀಕ್ಷೆಯಲ್ಲಿ 2 ಚಿನ್ನದ ಪದಕ**

ಪ್ರಸ್ತುತ ಅವರು ಸಂಗೀತದಲ್ಲಿ ಸ್ನಾತಕೋತ್ತರ ಪದವಿ (M. A. in Music) ಶಿಕ್ಷಣವನ್ನು ಹಾಗೂ Concert Performance ಎಂಬ ವಿಷಯದಲ್ಲಿ ಹೆಚ್ಚಿನ



ವ್ಯಾಸಂಗವನ್ನು ಅವರ ತಂದೆ ಡಾ|| ಆರ್. ಎನ್. ತಾರಾನಾಥನ್ ಹಾಗೂ ದೊಡ್ಡಪ್ಪ ಶ್ರೀ ಆರ್. ಎನ್. ತ್ಯಾಗರಾಜನ್ (ಹೆಸರಾಂತ ರುದ್ರಪಟ್ನಂ ಸಹೋದರರು) ಅವರಲ್ಲಿ ಮುಂದುವರೆಸುತ್ತಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯವು ನನ್ನ ಈ ವ್ಯಾಸಂಗಕ್ಕೆ "Subject Scholarship" ಅನ್ನು ಕೊಡುತ್ತಿದೆ.

ತಂದೆ : ಡಾ|| ಆರ್. ಎನ್. ತಾರಾನಾಥನ್

ತಾಯಿ : ಶ್ರೀಮತಿ ಕುಮುದಿನಿ

ಅಜ್ಜಂದಿರು : ದಿ|| ಆರ್. ಕೆ. ನಾರಾಯಣ ಸ್ವಾಮಿ ಮತ್ತು ದಿ|| ರಾಮಚಂದ್ರ

ಅಜ್ಜಿಯರು : ದಿ|| ಸಾವಿತ್ರಮ್ಮ ಮತ್ತು ಶ್ರೀಮತಿ ಸರಸ್ವತಮ್ಮ





### ಚಿ|| ಶ್ರೇಯಸ್ ಅವಧಾನಿ. ಬಿ.



**ದ್ವಿತೀಯ ಪಿ.ಯು.ಸಿ. (ಪಿ.ಸಿ.ಎಂ.) ಶೇ. 96**

ತಂದೆ : ಬಾಲಮುಕುಂದ್. ಬಿ. ಆರ್.

ತಾಯಿ : ಆಶಾ

ಅಜ್ಜಂದಿರು : ದಿ|| ಬಿ. ಟಿ. ರಾಜು ಮತ್ತು
ದಿ|| ಬಿ. ಎನ್. ಸುಬ್ಬರಾಯ

ಅಜ್ಜಿಯರು : ಶ್ರೀಮತಿ ಪುಟ್ಟಲಕ್ಷ್ಮಮ್ಮ ಮತ್ತು ದಿ|| ಅನಸೂಯಮ್ಮ

### ಚಿ|| ಪ್ರಮೋದ್ ಎಸ್. ಎಂ.



**ದ್ವಿತೀಯ ಪಿ.ಯು.ಸಿ. (ಪಿ.ಸಿ.ಎಂ.) ಶೇ. 95**

ತಂದೆ : ಮಂಜುನಾಥ್. ಎಸ್. ಸಿ.

ತಾಯಿ : ಸಂಧ್ಯಾ

ಅಜ್ಜಂದಿರು : ದಿ|| ಎಸ್. ಟಿ. ಚನ್ನಪ್ಪಯ್ಯ ಮತ್ತು
ಶ್ರೀ ಎಸ್. ಆರ್. ಮಾರ್ಕಂಡೇಯ

ಅಜ್ಜಿಯರು : ದಿ|| ಶ್ರೀಮತಿ ಸಾವಿತ್ರಮ್ಮ ಚನ್ನಪ್ಪಯ್ಯ ಮತ್ತು
ಶ್ರೀಮತಿ ಪ್ರಭಾವತಿ ಮಾರ್ಕಂಡೇಯ

**ಎಲ್ಲರಿಗೂ ಸಂಘದ ಅಭಿನಂದನೆಗಳು**

## *Change of Address*

**S. C. Manjunatha**
**Sandhya**

No. 30, Thulaja Bhavani Nilaya, 1st Floor, 13th Main,
Motappa Garden, Raghavendra Extn., Hosakerehalli,
Bangalore - 560 085

Ph : 22797850, 9731988788

# ಹರಿದಾಸ ಕೃತಿ ಪ್ರಚಾರಕರು

ಹರಿದಾಸ ಸಾಹಿತ್ಯ, ಪರಂಪರೆಯನ್ನು ಮಾಧ್ವಸಂಪ್ರದಾಯಸ್ಥರಲ್ಲಿ ಕಾಣುತ್ತೇವೆ. ಹಲವಾರು ದಾಸ ಶ್ರೇಷ್ಠರನ್ನು ಉಡುಪಿಯ ಇತಿಹಾಸದಲ್ಲಿ ನೋಡುತ್ತೇವೆ ಹಾಗೂ ದಾಸಕೃತಿಗಳನ್ನು ಜಾಸ್ತಿ ಪ್ರಚುರ ಪಡಿಸಿದವರಲ್ಲಿ ವೈಷ್ಣವರು ಮುಂಚೂಣಿಯಲ್ಲಿದ್ದಾರೆ.

ನಮ್ಮ ಸಂಕೇತಿ ಜನಾಂಗದವರು ಹರಿದಾಸ ಸಾಹಿತ್ಯ ಪ್ರಚಾರದಲ್ಲಿ ಸಾಕಷ್ಟು ಸೇವೆ ಸಲ್ಲಿಸಿರುತ್ತಾರೆ. ವೇದ, ಸಂಸ್ಕೃತ, ಸಂಗೀತ, ಶಾಸ್ತ್ರ, ಸಾಹಿತ್ಯ, ಕಲೆಗಳನ್ನು ಉಳಿಸಿ, ಕಲಿತು ಬೆಳೆಸಿದವರಲ್ಲಿ ಸಂಕೇತಿಗಳು ಮೇಲುಪಂಕ್ತಿಗೆ ಸೇರುತ್ತಾರೆ. ಜೀವನದ ಕಷ್ಟಕಾರ್ಪಣ್ಯ, ಬಡತನವಿದ್ದರೂ, ಏನೇ ತೊಂದರೆ ಇದ್ದರೂ ಕಲಾರಸಿಕರಾಗಿ, ಜ್ಞಾನಿಗಳಾಗಿ, ಪಂಡಿತರಾಗಿ, ಉಪಾಸಕರಾಗಿ ರಾಜ್ಯದಲ್ಲಿ ಒಂದು ವಿಶಿಷ್ಟವಾದ ತಮ್ಮತನವನ್ನು ಉಳಿಸಿ ಬೆಳೆಸಿಕೊಂಡು ಬರುತ್ತಿರುವ ಸಂಕೇತಿ ಜನಾಂಗವನ್ನು ಪೂರ್ವದಿಂದ ಇಲ್ಲಿಯವರೆಗೂ ಶ್ಲಾಘಿಸಬೇಕಾದುದೆ.

ಪುರಂದರ, ಕನಕದಾಸ ಶ್ರೇಷ್ಠರ ಕೃತಿಗಳಲ್ಲಿ ದೇವರನಾಮವಿರಬಹುದು, ಸಾಮಾಜಿಕ ಕಳಕಳಿ ಇರಬಹುದು, ಮಾನವ ಜೀವನದ ಮಾರ್ಗದರ್ಶನವಿರಬಹುದು, ಇಂಥಾ ಕೃತಿಗಳ ಸಾರವನ್ನು ಹಳ್ಳಿಹಳ್ಳಿಗೂ, ಜನಸಾಮಾನ್ಯರಿಗೂ ತಲುಪಿಸಿದ ಕೆಲವೇ ಮಹನೀಯರನ್ನು ಇತಿಹಾಸದ ಪುಟದಲ್ಲಿ ಕಾಣುತ್ತೇವೆ. ಅವರುಗಳ ಧ್ಯೇಯ ಸಮಾಜದ ಅಂಕುಡೊಂಕು, ದಿನನಿತ್ಯದ ಆಗುಹೋಗುಗಳ ತಪ್ಪನ್ನು ತಿದ್ದುವ ದಾಸರ ಪದಗಳನ್ನು ಸುಶ್ರಾವ್ಯವಾಗಿ ಹಾಡಿ ಆ ಮಧುರ ಗಾನ ಸುಧೆಯನ್ನು ಪಸರಿಸಿದ ವ್ಯಕ್ತಿಗಳಲ್ಲಿ ''ರುದ್ರಪಟ್ಟಣದ'' ಶಾಮೀಮಾಯ (ಶ್ರೀನಿವಾಸಯ್ಯ) ಹಾಗೂ ಕೇಶವದಾಸರು (ಮರೂರು ಕೇಶವ ಮಾಯ). ಶ್ರೀ ಶಾಮೀಮಾಯನವರು ರುದ್ರಪಟ್ಟಣದ ಆರ್. ಎನ್. ನಾರಣಪ್ಪನವರ ತೀರ್ಥರೂಪರವರು.

ರುದ್ರಪಟ್ಟಣ ಗ್ರಾಮ ಅರೆಮಲೆನಾಡು ಹಾಗೂ ಊರಿನ ಪಶ್ಚಿಮ ಭಾಗ ಮರಟಿ (ಗುಡ್ಡ) ಯಿಂದ ಕೂಡಿದೆ. ಶ್ರೀ ಶಾಮೀಮಾಯನವರ ಜಮೀನು ಮರಟಿಯಲ್ಲಿದ್ದುದರಿಂದ ಅವರನ್ನು ಮರಟಿ ಶಾಮಿ ಮಾಯ ಎಂದು ಕರೆಯುತ್ತಿದ್ದರು. ಸಾಕಷ್ಟು ಜಮೀನಿದ್ದ ಮಾಯನವರ ವೃತ್ತಿ ಕೃಷಿಯೇ ಆಗಿತ್ತು. ಅವರ ಪ್ರವೃತ್ತಿ ದಾಸರಹಾಗೆ ನೃತ್ಯ ಮಾಡಿಕೊಂಡು ಹಾಡಿ, ಹಾಡಿನ ತತ್ವಗಳ ಸಾರವನ್ನು ತಿಳಿಸಿ, ಸಂಗೀತದ ಮನೋರಂಜನೆ ಕೊಟ್ಟು, ಜನಗಳ ಅಂಕುಡೊಂಕುಗಳನ್ನು ತಿದ್ದಲು ಪ್ರೇರೇಪಿಸುತ್ತಿದ್ದರು. ಶ್ರೀಯುತರ ಕಾಲ ಸುಮಾರಿಗೆ 1870-80 ಇರಬಹುದು.

ಆಗ್ಗೆ ರುದ್ರಪಟ್ಟಣ ಕರ್ನಾಟಕ ಶಾಸ್ತ್ರೀಯ ಸಂಗೀತದ ಮೇರು ಪರ್ವತದಂತೆ ಇದ್ದಿತು. ಆದ್ದರಿಂದ ಶ್ರೀಯುತರಿಗೆ ಸಂಗೀತದ ಜ್ಞಾನ ಚೆನ್ನಾಗಿತ್ತು. ಹಾಗೂ ಸಂಗೀತದ ಭಂಡಾರವಾಗಿದ್ದ ದೊಡ್ಡ ತೊಟ್ಟೀಮನೆಗೆ ಸೇರಿದ ಶ್ರೀಯುತರಿಗೆ ಸಂಗೀತ ರಕ್ತದಲ್ಲೇ ಕರಗತವಾಗಿ ಬಂದಿರುತ್ತದೆ.

ತಮ್ಮ ಕೃಷಿ ಕೆಲಸದ ವಿರಾಮದಲ್ಲಿ ಊರು, ಕೇರಿಗಳಲ್ಲಿ ಅಕ್ಕಪಕ್ಕದ ಗ್ರಾಮಗಳಲ್ಲೂ ದಾಸಶ್ರೇಷ್ಠರ ಕೃತಿಗಳನ್ನು ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಚಿಕ್ಕ ತಂಬೂರಿ ಸಮೇತ ನಾಟ್ಯ ಮಾಡುತ್ತಾ





ರಾಗವಾಗಿ ಹಾಡುತ್ತ ದಾಸವೃತ್ತಿ ಮಾಡುತ್ತಿದ್ದರು. ಶ್ರೀಯುತರ ಸೇವೆ ಹಾಸನ, ಮೈಸೂರು ಜಿಲ್ಲೆಗಳಲ್ಲೂ, ಕೊಡಗು ಪ್ರಾಂತದಲ್ಲೂ ನಡೆಯುತ್ತಿತ್ತು.

ಸೋರೆ ಬುರುಡೆಯ ಒಂದು ತಂತಿಯ ತಂಬೂರಿ, ಕಾಲಿಗೆ ಗೆಜ್ಜೆ ತಲೆಗೆ ಪೇಟಾ, ಬಾಯಲ್ಲಿ ಹರಿಯ ಭಜನೆ ಜೊತೆಗೆ ಊಂಛ ವೃತ್ತಿಯನ್ನು ಮಾಡುತ್ತಿದ್ದರು. ಜನಗಳು ದಾಸರಿಗೆ ಕೊಟ್ಟ ದವಸ ಧಾನ್ಯಗಳನ್ನು ಪ್ರಸಾದವೆಂದು ಭಾವಿಸಿ ಸ್ವೀಕರಿಸಿ ಊರಿನಲ್ಲಿ ಹಂಚುತ್ತಿದ್ದರು. ವಾಸ್ತವವಾಗಿ ಈ ವೃತ್ತಿ ಗರ್ವವನ್ನು ಬಿಡಿಸಿ ಸಮಾಜದಲ್ಲಿ ಸಮಾನತೆಯನ್ನೂ ಕೊಡುತ್ತದೆ. ತಾವು ಜಮೀನ್ದಾರರಾಗಿದ್ದರೂ ತಮ್ಮ ಮುಖ್ಯ ಧ್ಯೇಯ ದಾಸರ ಪದಗಳನ್ನು ಸಾಮಾನ್ಯ ಜನರಿಗೆ ಪಸರಿಸುವುದು. ಆದ್ದರಿಂದ ಭಿಕ್ಷೆಯನ್ನೂ ಪವಿತ್ರವೆಂದು ಭಾವಿಸಿದ ಶಾಮಿಮಾಯನವರ ಘನತೆಯನ್ನು ಹೊಗಳುವಂತಹದೆ.

ಶ್ರೀ ಶಾಮಿಮಾಯನವರಿಗೆ ಮೂರುಜನ ಪುತ್ರರು ಮತ್ತು ಒಬ್ಬಳು ಪುತ್ರಿ ಇದ್ದರು. ಆರ್. ಎನ್. ನಾರಣಪ್ಪ, ವೀಣೆ ವಿದ್ವಾಂಸರಾದ ವೀಣೆ ರಂಗಪ್ಪನವರು ಮದರಾಸಿನಲ್ಲಿದ್ದರು. ಕಿರಿಯ ಮಗ ವೆಂಕಟರಾಮಯ್ಯನವರು ನಿವೃತ್ತ ಮುಖ್ಯ ಲೆಕ್ಕಾಧಿಕಾರಿ (ಎಂಎಸ್ಇಬಿ) ಮುಂಬಯಿಯಲ್ಲಿದ್ದರು ಮತ್ತು ಮಗಳು ಸಾತಕ್ಕ.

1890ರ ಸುಮಾರಿನಲ್ಲಿ ರುದ್ರಪಟ್ಟಣದಲ್ಲಿ ಶ್ರೀ ಆರ್. ಎನ್. ನಾರಣಪ್ಪ (ಶಾಮಿ ಮಾಯನವರ ಜ್ಯೇಷ್ಠ ಪುತ್ರ) ನವರ ಜನನ. ಬಾಲಕ ನಾರಣಪ್ಪ ತಮ್ಮ ವಿದ್ಯಾಭ್ಯಾಸದ ಜೊತೆಗೆ ತಂದೆಯವರಿಂದ ಸಂಗೀತ, ಸಾಹಿತ್ಯಜ್ಞಾನ, ದೇವರನಾಮದ ಜೊತೆಗೆ ಊರಿನ ಕಲ್ಲಿಕೋಟೆ ಶ್ರೀ ಕೃಷ್ಣಶಾಸ್ತ್ರಿಗಳಿಂದ ಸಂಸ್ಕೃತ, ಗಮಕ ಪಾಠ ನಡೆಯಿತು.

ಕನ್ನಡ ಮತ್ತು ಸಂಸ್ಕೃತದಲ್ಲಿ ಪಂಡಿತರಾದ ಅವರಿಗೆ ಸರ್ಕಾರಿ ಮಾಧ್ಯಮಿಕ ಶಾಲೆಯಲ್ಲಿ ಕನ್ನಡ ಪಂಡಿತರಾಗಿ ಕೆಲಸ ದೊರೆತು ಹಾಸನ ಜಿಲ್ಲೆಯಾದ್ಯಂತ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು ತಮ್ಮ ವೃತ್ತಿಯ ಜೊತೆಗೆ ಕಾವ್ಯವಾಚನ, ಹರಿಕಥೆ, ಶಿವಕಥೆ ಹೇಳುವುದನ್ನೂ ಪ್ರವೃತ್ತಿಯಾಗಿ ಜೀವನದಲ್ಲಿ ಅಳವಡಿಸಿಕೊಂಡು ಹಾಸನ, ಮೈಸೂರು, ಕೊಡಗು ಜಿಲ್ಲೆಗಳಲ್ಲಿ ಹಲವಾರು ಕಾರ್ಯ ಕ್ರಮಗಳನ್ನು ಕೊಟ್ಟು ಕೀರ್ತಿ ಗಳಿಸಿರುತ್ತಾರೆ.

ಶ್ರೀ ನಾರಣಪ್ಪನವರು ಆಲೂರಿನಲ್ಲಿ ಇದ್ದಾಗ ಡಾ|| ನಂಜಪ್ಪನವರ ಸಂಪರ್ಕದಿಂದ ಶ್ರೀ ರೇಣುಕಾಚಾರ್ಯ ಜಯಂತಿಗೆ ರೇಣುಕಾ ಲೀಲೆಯ ಕಥೆಯನ್ನೂ, ಕೀರ್ತನ ರೂಪದಲ್ಲಿ ಶಿವಕಥೆಯನ್ನೂ ರಾತ್ರಿ 10 ಗಂಟೆಗೆ ಪ್ರಾರಂಭಿಸಿ ಸಾವಿರಾರು ಭಕ್ತಾದಿಗಳ ನಡುವೆ ಶಬ್ದವರ್ಧಕ ಯಂತ್ರ ಇಲ್ಲದ ಕಾಲದಲ್ಲಿ ತಮ್ಮ ಕಂಠ ಮಾಧುರ್ಯದಿಂದ ಮಧ್ಯರಾತ್ರಿ 3 ಗಂಟೆಯವರೆಗೆ ಪ್ರೇಕ್ಷಕರನ್ನು ರಂಜಿಸಿದರು. ಈ ಕಾರ್ಯಕ್ರಮದಿಂದ ಹುರಿದುಂಬಿದ ಡಾ|| ನಂಜಪ್ಪನವರು ಶ್ರೀ ನಾರಣಪ್ಪನವರಿಂದ ಶ್ರೀ ರೇಣುಕಾಚಾರ್ಯರ ಬಗ್ಗೆ ಪುಸ್ತಕ ಬರೆಸಬೇಕೆಂದು ಅವರಲ್ಲಿ ಅರಿಕೆ ಮಾಡಿಕೊಂಡರು.

ಡಾ|| ನಂಜಪ್ಪನವರ ಕೋರಿಕೆಯಂತೆ ''ಶ್ರೀ ಜಗದ್ಗುರು ರೇಣುಕಾಚಾರ್ಯ ಕೀರ್ತನ

ಮಾಲಾ'' ಎಂಬ ಗ್ರಂಥವನ್ನು ಬೃಹನ್ಮಠದ ಗುರುವರ್ಯ ಶ್ರೀ ಶಿವಾಚಾರ್ಯ ಮಹಾ ಸ್ವಾಮಿಗಳಿಂದ 1962ರಲ್ಲಿ ಈ ಮಹಾಗ್ರಂಥವನ್ನು ಬಿಡುಗಡೆ ಮಾಡಲಾಯಿತು. ಈ ಕೃತಿಗೆ ''ಸತ್ಕಥಾ ರಚನಾ ರತ್ನ'' ಎಂಬ ಬಿರುದನ್ನು ಕೊಟ್ಟು ಗೌರವಿಸಿದರು. ಶ್ರೀಯುತರ ಬಗ್ಗೆ ಲಿಂಗಾಯಿತ ಮಠಗಳು ಬಹಳ ಶ್ಲಾಘಿಸಿ ಗೌರವಿಸಿರುತ್ತಾರೆ.

ಈ ಗ್ರಂಥದ ವಿಶೇಷತೆ ಏನೆಂದರೆ ನವರಾತ್ರಿಯ ಒಂಭತ್ತು ರಾತ್ರಿಯೂ ಶಿವಕಥೆ ಹಾಡಿ ಶ್ರೀ ರೇಣುಕಾಚಾರ್ಯರ ಕೀರ್ತನೆ ನಡೆಸುತ್ತಾರೆ. ದಾವಣಗೆರೆ ಹಾಗೂ ಸುತ್ತಮುತ್ತಲ ಗ್ರಾಮಗಳಲ್ಲೂ ಹಲವಾರು ಶಿವಕಥೆ, ಕೀರ್ತನ ಕಾರ್ಯಕ್ರಮ ನಡೆಸಿರುತ್ತಾರೆ. ಈ ಕೀರ್ತನ ಶಿವಕಥೆ ಲಿಂಗಾಯಿತರಲ್ಲಿ ಹೊಸ ಸಂಚಲನ ಮೂಡಿಸಿತು.

ಅಧ್ಯಾಪಕ ವೃತ್ತಿಯಿಂದ ನಿವೃತ್ತಿಯಾದ ನಂತರ ಹಾಸನ ನಗರದಲ್ಲಿ ನೆಲೆಸಿ ಬಹಳ ಹರಿಕಥೆ, ಕಾವ್ಯವಾಚನ ನಡೆಸಿರುತ್ತಾರೆ. ಆ ಸಂದರ್ಭದಲ್ಲಿ ಮುರುಗನ್ ಟ್ರಾನ್ಸ್‌ಪೋರ್ಟ್ (ಕೂರ್ಗ್ ಟ್ರಾನ್ಸ್‌ಪೋರ್ಟ್) ಎಂಬ ಒಂದು ಬಸ್ ಸಾರಿಗೆ ಸರ್ವೀಸನ್ನು ತಮ್ಮ ಊರಾದ ರುದ್ರಪಟ್ಟಣದಿಂದ ಜಿಲ್ಲಾಕೇಂದ್ರ ಹಾಸನಕ್ಕೆ ರಹದಾರಿಯನ್ನು ಪಡೆದು ಹಾಸನ-ಪಿರಿಯಾಪಟ್ಟಣ ರುದ್ರಪಟ್ಟಣ, ಬೆಟ್ಟದಪುರ ಮಾರ್ಗವಾಗಿ ಬಸ್ ಓಡಿಸುತ್ತಿದ್ದರು. ಸಾಕಷ್ಟು ಕಾಲ ಬಸ್ಸನ್ನು ಈ ಮಾರ್ಗವಾಗಿ ಓಡಿಸಿ ಸಮಾಜಕ್ಕೆ ಸೇವೆ ಸಲ್ಲಿಸಿರುತ್ತಾರೆ.

ತಮ್ಮ ಬಸ್ಸು ತಿರುಗಾಡುವ ಮಾರ್ಗದ ಜನರ ಕುಶಲೋಪರಿ ಮಾಡುತ್ತಿದ್ದರು. ಒಮ್ಮೆ ಬೆಟ್ಟದಪುರದಲ್ಲಿ ಸಂಬಂಧಿಕರಾದ ಶ್ರೀಮತಿ ಪುಟ್ಟಲಕ್ಷ್ಮಮ್ಮನವರ ಆರೋಗ್ಯ ವಿಚಾರಿಸಲು ಶ್ರೀಯುತರು ಹೋದಾಗ, ನನ್ನ ಅಂತ್ಯ ಕಾಲ ಸಮೀಪಿಸುತ್ತಿರುವುದರಿಂದ ಒಂದು ಬಿಂದಿಗೆ ''ಕಾವೇರಿ'' ತೀರ್ಥವನ್ನು ಮಡಿಯಲ್ಲಿ ತಂದು ಸ್ನಾನ ಮಾಡಿಸೆಂದು ಶ್ರೀಮತಿಯವರಿಂದ ಅರಿಕೆಯಾಯಿತು.

ಮಾರನೆಯ ದಿನವೇ ಶ್ರೀ ನಾರಣಪ್ಪನವರು ರಾಮನಾಥಪುರದಲ್ಲಿ ಕಾವೇರಿ ಸ್ನಾನ ಮಾಡಿ, ಒದ್ದೇಪಂಚೆಯಲ್ಲೇ ಒಂದು ತಾಮ್ರದ ಬಿಂದಿಗೆಯಲ್ಲಿ ಕಾವೇರಿ ತೀರ್ಥ ತಮ್ಮ ಹೆಗಲಮೇಲೆ ಇಟ್ಟುಕೊಂಡು 15 ಕಿ.ಮೀ. ದೂರ ಬರೀ ಕಾಲಿನಲ್ಲೇ ನಡೆದುಕೊಂಡು ಬೆಟ್ಟದಪುರ ತಲುಪಿ ನೆಂಟರ ಆಸೆಯನ್ನು ಪೂರೈಸಿದ ಆದರ್ಶ ಪುರುಷ. ಸಂಕೇತಿಗಳಿಗೆ ಕಾವೇರಿ ಮಾತೆಯಲ್ಲಿ ಅಚಲವಾದ ಭಕ್ತಿ, ಗೌರವವನ್ನು ಪುನಃ ನೆನೆಪಿಸಿಕೊಳ್ಳುವ ಸಂಗತಿ ಇದು. ತಮ್ಮ ಬಸ್ಸಿನಲ್ಲೆ ಒಂದು ಬಿಂದಿಗೆ ನೀರನ್ನು ತಂದು ಕೊಡಬಹುದಾಗಿತ್ತು. ಆದರೆ ನಾರಣಪ್ಪನವರ ಶ್ರದ್ಧೆ, ತಮಗೆ ತೊಂದರೆಯಾದರೂ ಪರವಾಗಿಲ್ಲ, ಶ್ರೀಮತಿ ಪುಟ್ಟಲಕ್ಷ್ಮಮ್ಮನವರ ಆಸ್ಥೆ, ಮನಸ್ಥಿತಿಯನ್ನು ಅರ್ಥಮಾಡಿಕೊಂಡು ನಿಸ್ವಾರ್ಥ ಸೇವೆ ಮಾಡಿದ ಮಹಾ ಪುರುಷ ನಾರಣಪ್ಪನವರಿಗೆ ನಮನ.

ಶ್ರೀ ನಾರಣಪ್ಪನವರ ಮನೆಯವರು ರುದ್ರಪಟ್ಟಣದ ಹಂಪಾಪುರ ವಠಾರಕ್ಕೆ ಸೇರಿದವರು. ಇವರುಗಳಿಗೆ ಇಬ್ಬರು ಗಂಡುಮಕ್ಕಳು. ಶ್ರೀ ಶಾಮಣ್ಣ (ಉಪಾಧ್ಯಾಯರು) ಮತ್ತು





ನಾರಾಯಣಸ್ವಾಮಿ (ಆರ್.ಟಿ.ಒ.) ಹಾಗೂ ನಾಲ್ಕು ಜನ ಹೆಣ್ಣುಮಕ್ಕಳು.

1964ರಲ್ಲಿ ಶ್ರೀ ನಾರಣಪ್ಪನವರು ಕಾಲವಾದರು. ಅವರ ಇಳೀವಯಸ್ಸಿನ ಕಲಾರಾಧನೆ, ಶ್ರದ್ಧೆ ಸಮಾಜ ಸೇವೆಗಳನ್ನು ಶ್ಲಾಘಿಸುವಂತಹದ್ದು.

ಮಾಹಿತಿ ಒದಗಿಸಿದ ಶ್ರೀ ನಾರಾಯಣ ಸ್ವಾಮಿಗಳಿಗೆ ಕೃತಜ್ಞತೆಗಳು.

- ರು. ಸೂ. ಭಾಸ್ಕರ ಅವಧಾನಿ

## ನಿಮ್ಮ ಉತ್ತರ

ಜುಲೈ-ಆಗಸ್ಟ್ 2009ರ ಸಂಕೇತಿ ವಾರ್ತಾದಲ್ಲಿ ಡಾ|| ಆರ್. ಶಾಮಾಶಾಸ್ತ್ರಿಯವರನ್ನು ಪರಿಚಯಿಸುವ ಲೇಖನ ಚೆನ್ನಾಗಿ ಮೂಡಿಬಂದಿದೆ. ಮುಖಪುಟದಲ್ಲಿ ಶ್ರೀ ಶಾಮಾಶಾಸ್ತ್ರಿಗಳ ಭಾವಚಿತ್ರ ಪ್ರಕಟಿಸಿರುವುದು ಔಚಿತ್ಯಪೂರ್ಣವಾಗಿದೆ.

ಈ ಸಂದರ್ಭದಲ್ಲಿ ಶಾಮಾಶಾಸ್ತ್ರಿಗಳು ವಿದೇಶಗಳಲ್ಲೂ ಹೇಗೆ ಖ್ಯಾತರಾಗಿದ್ದೆಂಬುದಕ್ಕೆ ಒಂದು ನಿದರ್ಶನ ಕೊಡಬಯಸುತ್ತೇನೆ.

ಒಮ್ಮೆ ಮೈಸೂರಿನ ಮಹಾರಾಜರಾಗಿದ್ದ ಶ್ರೀಮನ್ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಜರ್ಮನಿಗೆ ಹೋಗಿದ್ದಾಗ ಅಲ್ಲಿನ ನಿರಂಕುಶಾಧಿಕಾರಿ ಮಹತ್ವಾಕಾಂಕ್ಷಿ ಅಡಾಲ್ಫ್ ಹಿಟ್ಲರ್‌ನನ್ನು ಭೇಟಿಯಾದರು. ತಾವು ಇಂಡಿಯಾದ ಮೈಸೂರಿನ ಮಹರಾಜರವರು ಎಂದು ಪರಿಚಯಿಸಿಕೊಂಡರು. ಹಿಟ್ಲರ್‌ಗೆ ಮೈಸೂರಿನ ಕಲ್ಪನೆ ಬರಲಿಲ್ಲ. ಆಗ ಮಹಾರಾಜರು ಭಾರತದ ಭೂಪಟವನ್ನು ಹರಡಿ ಅದರಲ್ಲಿ ದಕ್ಷಿಣಕ್ಕಿರುವ ಒಂದು ಭಾಗವನ್ನು ತೋರಿಸಿ ಇದೇ ಮೈಸೂರು ಎಂದು ತಿಳಿಸಿದರು. ಆದರೂ ಹಿಟ್ಲರ್‌ಗೆ ಆ ಭೂಭಾಗದ ಚಿತ್ರ ಮನಸಿನಾಳದಲ್ಲಿ ಮೂಡಲಿಲ್ಲ. ಮಹಾರಾಜರು ಹೇಳಿದುದನ್ನು ವ್ಯವಧಾನದಿಂದ ಆಲಿಸಿ ಹಿಟ್ಲರ್ ಒಂದು ಕ್ಷಣ ಯೋಚಿಸಿ ಒಮ್ಮಿಂದೊಮ್ಮೆಲೇ ಕೇಳಿದ : **'Whether that Mysore is the place where R. Shama Shastri lives'** (ಆರ್. ಶಾಮಾಶಾಸ್ತ್ರಿ ಇದ್ದಾರಲ್ಲ ಆ ಮೈಸೂರಿನ ರಾಜರೇ ನೀವು ?)

ಮಹಾರಾಜರು ಚಕಿತರಾದರು. ಹಿಟ್ಲರ್ ಶಾಮಾಶಾಸ್ತ್ರಿಗಳು ಇಂಗ್ಲೀಷಿಗೆ ಅನುವಾದಿಸಿದ್ದ ಕೌಟಿಲ್ಯನ ಅರ್ಥಶಾಸ್ತ್ರವನ್ನು ಚೆನ್ನಾಗಿ ಓದಿಕೊಂಡಿದ್ದನು. ಅವನಿಗೆ ಶಾಮಾಶಾಸ್ತ್ರಿಗಳ ನೆನಪು ಚೆನ್ನಾಗಿ ಇದ್ದಿತು. ಮಹಾನ್ ಪುಸ್ತಕ ಪ್ರೇಮಿ ಹಿಟ್ಲರ್ ಶಾಮಾಶಾಸ್ತ್ರಿಗಳ ಪುಸ್ತಕವನ್ನು ತುಂಬಾ ಗೌರವಿಸಿದ್ದನು. ಹಾಗೆ ನೋಡಿದರೆ ಶಾಮಾಶಾಸ್ತ್ರಿಗಳ ಹೆಸರಷ್ಟೆ ಬಲ್ಲವರಾಗಿದ್ದ ಮಹಾರಾಜರು ಹಿಟ್ಲರ್ ಗುರುತಿಸುವಂಥ ದೊಡ್ಡವ್ಯಕ್ತಿ ಎಂದು ತಿಳಿದಿರಲಿಲ್ಲ. ಊರಿಗೆ ಹಿಂದಿರುಗಿದೊಡನೆ ಶಾಮಾಶಾಸ್ತ್ರಿಗಳನ್ನು ಕರೆಸಿಕೊಂಡು ಅವರಿಗೆ ದೊಡ್ಡ ಸನ್ಮಾನ ಮಾಡಿದರು.

- ಬೆ. ಗೋ. ರಮೇಶ್

# ಬೆಂಗಳೂರು ಸಂಕೇತಿ ಮಹಿಳಾ ಸಮಾಜ ಟ್ರಸ್ಟ್(ರಿ.)

## ಸಂಕೇತಿಗಳಿಗೆ ಸಂಗೀತ ಸ್ಪರ್ಧೆ

ದಿನಾಂಕ : ಅಕ್ಟೋಬರ್ 11, 2009 ★ ಸ್ಥಳ : ಜಯರಾಮ ಸೇವಾ ಮಂಡಳಿ
492/ಎ, 1ನೇ ಮುಖ್ಯರಸ್ತೆ, 8ನೆ ಬ್ಲಾಕ್,
ಜಯನಗರ, ಬೆಂಗಳೂರು - 82
ದೂ : 22445232

★ ಕಳೆದ ಎರಡು ಸಂಚಿಕೆಗಳಲ್ಲಿ ಸ್ಪರ್ಧೆ ಅಕ್ಟೋಬರ್ 18 ಎಂದು ತಪ್ಪಾಗಿ ಪ್ರಕಟವಾಗಿತ್ತು.

| ದೇವರ ನಾಮ ಸ್ಪರ್ಧೆ (ಅವಧಿ 3 ನಿಮಿಷ) | ಶಾಸ್ತ್ರೀಯ ಸಂಗೀತ (ಅವಧಿ 10ನಿಮಿಷ) |
|---|---|
| (ಬೆಳಿಗ್ಗೆ10ರಿಂದ 12.30ರವರೆಗೆ) | (ಮಧ್ಯಾಹ್ನ1.30ರಿಂದ 4 ಗಂಟೆಯವರೆಗೆ) |
| (ವಯೋಮಿತಿ 6ರಿಂದ 12) | (ವಯೋಮಿತಿ 12ರಿಂದ 18 ವರ್ಷ) |
| ಸ್ಪರ್ಧಿಯ ಹೆಸರು : | ಸ್ಪರ್ಧಿಯ ಹೆಸರು : |
| ತಂದೆ-ತಾಯಿಯ ಹೆಸರು : | ತಂದೆ-ತಾಯಿಯ ಹೆಸರು : |
| ವಿಳಾಸ ಮತ್ತು ದೂರವಾಣಿ : | ವಿಳಾಸ ಮತ್ತು ದೂರವಾಣಿ : |
| ಸ್ಪರ್ಧಿಯ ವಯಸ್ಸು : | ಸ್ಪರ್ಧಿಯ ವಯಸ್ಸು : |
| ಹಾಡಬಯಸುವ ಯಾವುದಾದರೂ 3 ದೇವರನಾಮಗಳು | ಹಾಡಬಯಸುವ ಯಾವುದಾದರೂ 3 ಕೃತಿಗಳು |
| ಎ) ರಚನೆ : | ಎ) ರಚನೆ : |
| ಬಿ) ರಾಗ : | ಬಿ) ರಾಗ : |
| ಸಿ) ತಾಳ : | ಸಿ) ತಾಳ : |

ವಿ.ಸೂ.:1. ಸ್ಪರ್ಧಿಯ ತಂದೆ/ತಾಯಿ ಸಂಕೇತಿಯಾಗಿರಬೇಕು. 2. ಈ ವಿವರಗಳನ್ನೊಳಗೊಂಡ ಅರ್ಜಿಯೊಂದಿಗೆ ವಯಸ್ಸಿನ ದೃಢೀಕರಣ ಪತ್ರ ಇರಬೇಕು. 3. ಸ್ಪರ್ಧಿಯ ಸ್ಪರ್ಧೆ ಪ್ರಾರಂಭವಾಗುವ ಅರ್ಧ ಗಂಟೆ ಮುಂಚೆ ಬಂದು ತಮ್ಮ ಹಾಜರಾತಿಯನ್ನು ದೃಢೀಕರಿಸಬೇಕು. 4. ಪ್ರವೇಶ ಧನ ರೂ. 50/-. 5. ಅರ್ಜಿ ನೀಡಿ ಭಾಗವಹಿಸದಿದ್ದಲ್ಲಿ ಪ್ರವೇಶಧನ ವಾಪಸ್ಸಾಗುವುದಿಲ್ಲ. **6. ದೇವರನಾಮ ಸ್ಪರ್ಧೆಗೆ ಮೊದಲ 25 ಜನರಿಗೆ ಮಾತ್ರ ಅವಕಾಶ. 7. ಶಾಸ್ತ್ರೀಯ ಸಂಗೀತಕ್ಕೆ ಮೊದಲ 15 ಜನರಿಗೆ ಮಾತ್ರ ಅವಕಾಶ.**





8. ನೀವು ಬರೆದು ಕಳುಹಿಸಿರುವ 3 ಕೃತಿಗಳಲ್ಲಿ ಯಾವುದಾದರೂ ಒಂದು ಹಾಡು/ಕೃತಿಯನ್ನು ಹಾಡಿಸಲಾಗುವುದು. 9. ಶಾಸ್ತ್ರೀಯ ಸಂಗೀತದಲ್ಲಿ ಆಲಾಪನೆ, ಕೃತಿ, ಸ್ವರ ಎಲ್ಲಕ್ಕೂ ಆದ್ಯತೆ ಉಂಟು. 10. ನಿಮ್ಮ ಅರ್ಜಿ ನಮಗೆ **ಸೆಪ್ಟೆಂಬರ್ 22ರೊಳಗೆ ತಲುಪಬೇಕು.** 11. ಸ್ಪರ್ಧಿಯ ಇತ್ತೀಚಿನ ಭಾವಚಿತ್ರವನ್ನು ಲಗತ್ತಿಸಬೇಕು.

ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ :

| ದೇವರನಾಮ : | ಶಾಸ್ತ್ರೀಯ ಸಂಗೀತ : |
|---|---|
| ಗಾಯತ್ರಿ ರಾವ್ | ನಳಿನಿ ನಟರಾಜ್ |
| ನಂ. 4'ಎ', ಎಂ.ಎನ್.ಕೆ. ರಾವ್ ರಸ್ತೆ | ನಂ. 210, 45ನೇ ಅಡ್ಡರಸ್ತೆ, 8ನೇ ಬ್ಲಾಕ್ |
| ಬಸವನಗುಡಿ, ಬೆಂಗಳೂರು - 04 | ಜಯನಗರ, ಬೆಂಗಳೂರು - 70 |
| ದೂ : 26570492, 9980481245 | ದೂ : 26645662, 9481788495 |

ರು. ಕೃ ಗೀತಾಮಣಿ
ಮ್ಯಾನೇಜಿಂಗ್ ಟ್ರಸ್ಟೀ
ದೂ : 26695657

## ವೇದ ಸಂಪುಟಗಳು ಲಭ್ಯ

ಬೆಂಗಳೂರಿನ ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಪ್ರಕಾಶನಗೊಳ್ಳುತ್ತಿರುವ ಕೃಷ್ಣಯಜುರ್ವೇದದ 7 ಸಂಪುಟಗಳು ಈಗಾಗಲೇ ಪ್ರಕಟಗೊಂಡಿವೆ. 8ನೇ ಸಂಪುಟ ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರ ಅಮೃತ ಹಸ್ತದಿಂದ ಬಿಡುಗಡೆಯಾಗಿದೆ. ಇದೂ ಕೂಡ ಈಗ ಲಭ್ಯ. 8 ಸಂಪುಟಗಳ ಒಟ್ಟು ಬೆಲೆ ರೂ. 1675/-.

8ನೇ ಸಂಪುಟದ ಬೆಲೆ ರೂ. 250/-.

ಪ್ರತಿ ಮನೆಯನ್ನೂ ಬೆಳಗುವ ಈ ಅಪೂರ್ವ ಗ್ರಂಥರಾಶಿಯನ್ನು ಕೊಳ್ಳಲು ಬಯಸುವವರು ಈ ಕೆಳಕಂಡವರನ್ನು ಸಂಪರ್ಕಿಸಲು ಕೋರಿದೆ.

ಬಿ. ಎನ್. ವಿ. ಸುಬ್ರಹ್ಮಣ್ಯ
ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನ
ನಂ. 31, ಪಂಪ ಮಹಾಕವಿ ರಸ್ತೆ, ಶಂಕರಪುರಂ, ಬೆಂಗಳೂರು - 04
ದೂರವಾಣಿ : 080 - 2667 7852, 94480 55562

# Beware of Desire

**Lt. Col. B.V.S. Rao (Retd.)**

Beware of desire. If, by a lucky coincidence, God's wish coincides with our wish, it gets fulfilled. If not, it does not get fulfilled and it results in anger and frustration. If we get what we desire, we hardly realise it is due to God's grace.

Long ago, in the early forties, I read a small story - Monkey's Paw by W.W. Jacobs - with a powerful message. A man is given a monkey's paw with special powers of granting a wish expressed three times in a beach near the sea. To test this, he takes it to the sea beach and holding it in the hand, and loudly expresses a wish to receive a lakh of rupees. On reaching his home, he receives a telegram informing him regretfully of his son's accidental death in malfunctioning of a lift and that he would receive one lakh rupees as compensation. He was devastated. It was his only son who was about 22 years old. He very much regretted his having wished to test the powers of the monkey's paw. The wish came true but at what a terrible cost. Did not mother Kunti in the Mahabharata utter a sacred mantra just to test the efficacy of the mantra with its most devastating results which changed the entire course of the Mahabharata war?

A desire arises as a thought. We have no control over thoughts that arise in the mind. Similarly we have no control over desires that arise in the mind. In daily life, it is not possible to avoid desires. To fulfill desires, action or effort has to be taken. It is in our hands to take such action or to deny action





when the desire dies. We have to be careful with strong desires that compel or demand fulfillment, whatever the cost. Drug addicts do not hesitate to commit any crime in order to satisfy the desire. Worse is the case of sex maniacs who resort to even rape or murder.

The object of desire is seeking happiness. We mistakenly think the source of happiness is in the object we wish to have. But it is not so. A desire that arises causes a disturbance in the mind. This intensifies the agitation until the desire is satisfied. Once this takes place, the agitation ceases and the mind becomes quiet without any disturbance which appears as happiness. Freedom from agitation is happiness which is from within us and is not from outside, viz the object. If happiness is inherent or intrinsic to the object, then, this object must be the source of happiness to everybody, always and everywhere. There is no such object in the world. Some like to drink coffee but others like only tea and not coffee. Alcoholic dririks bring happiness to some, (although there may be hangover later) but many may resent it. One may like a mango, particularly in the beginning of the season, and may eat one, two or three at a time initially. Before long, he may be satisfied with only one or two and may not care to have more. If mango is the source of happiness, this would not happen. No object in the world has any intrinsic value. The only value it has is what man gives to it. A man after a very heavy meal - say a marriage feast - is not attracted by the best of dishes. When a person is feeling full, i.e. "purna", he has no desire for anything, i.e. desirelessness. Is it a desire when a man does what needs to be done ? To eat a meal when hungry, is it desire ? To want to

eat only a particular dish or item of food and to reject others may be due to likes and dislikes i.e. desire. To go to a doctor when sick cannot be termed as desire. To have a craving for more and more, whether it is money, name or anything else is certainly desire. Wants may be satisfied but "wanting" continues. It is never satiated and level of saturation is never reached. When the thin time between need and want vanishes and when greed takes its place, and becomes irresistible, it spells doom. Most desires are selfish. My desires are mostly for me, my family, my friends or relations - always my or mine etc. Only universal prayers like sacred Gayatri mantra, "Loka Samasto sukhino bhavantu....." and "Sarve Bhavantu sukhinaha ...." are truly unselfish desires, to name a few.

Desires are due to "Ichha shakti", a divine shakti. Kama is one of the four purusharthas, but it should be within the first purushartha - Dharma and thus it becomes a legitimate desire worthy of being satisfied. Wealth may be acquired by dharmic means. When wealth is accumulated by adharmic means, as Oliver Goldsmith says, man decays. Desires cannot be avoided. It is quite natural for a childless couple to strongly and intensely pray for being blessed with a baby. When the prayer is answered and a baby is born, more and more desires follow. The child must be healthy, grow up well, well educated etc. etc. The list is endless. If, on the other hand, in answer to such a prayer, a child is born, but unfortunately on account of some karmic debt or any other reason, the child is born deformed or with any serious health problems etc., the parents are devastated and will greatly regret having prayed for the child and hold themselves responsible. But then, it is too late,





the damage is done and cannot be undone. The price has to be paid. A wish may be fulfilled. But what also comes with the wish cannot be foreseen.

Take the case of King Yayati of Srimad Bhagwata. Even after enjoying all his sensual pleasures of married life for a long long time and becoming old, the desire for continuing to enjoy such pleasures did not subside. He had four sons and he asked each one of them if he would exchange his (son's) youth with the father's old age. Three of them refused and the fourth son agreed and exchanged his youth with his father. The now youthful king Yayati again enjoyed the pleasures of family life for a very long time indeed. At last a time came when he was disillusioned. He then decided to hand back to his son his youth, took back his old age, gave up his kingdom in favour of his son and returned to the forest for tapas. Indulging in sensual pleasures increases the appetite for more and more. Pouring ghee over raging fire does not put off fire but makes the fire rage more furiously.

I heard in a discourse. There was a king who had a number of queens. He however had remained childless. Sage Narada happened to visit the king. The king fervently prayed to sage Narada for blessing of a child. The king was blessed and given a fruit to be given to his favourite queen and he did as he was told. As per the blessing, a baby boy was born. The king and queen were overjoyed and the boy grew to be 10 or 12 years old. In the meanwhile, the other queens became highly jealous of the boy and conspired to get the boy killed. They managed to get the boy poisoned through the palace cook. The boy died as a result and the king and queen were

inconsolable. Soon after, it so happened that Narada again visited the king and was told the whole story. They prayed to him to somehow restore the boy back to them.

Narada, with his divya drishti called back the boy's atma and told him how his earthly parents were inconsolable and depressed and pressed him to come back to earthly life and thus mightily please his parents. The boy was perplexed. He asked which parents he had to please as he had numerous sets of parents in all his previous births and was in no position to please all his parents. He politely declined. The king and queen, although highly disappointed, understood the boy's point of view. Their ego was hurt that the boy whom they so lovingly brought up now declined to live with them. They might have now felt whether they did right by praying to sage Narada for blessing of a baby and if they would have been better off being childless. Now they had to live with this "putra shoka" for their entire life.

Acceptance of "what is" is desirelessness. We confront certain circumstances and situations as they happen and we have absolutely no control over them. We have no choice but to accept them. Pleasant or unpleasant and sometimes may be even painful events take place. Accepting such painful events is difficult but yet we must do what needs to be done as the situation demands. What happens to us in life is the effect of absolutely fair and impartial, yet unforgiving Law of Karma and what we get is nothing more or nothing less than what we deserve depending on our deeds or misdeeds. We ourselves are responsible for what we get. All our prayers are nothing but "wish lists" and we ask for "things" which God





gives and we do not ask for the "Giver Himself. Wise people say that if the longing is intense for liberation and to merge into God Himself and is the only desire and for nothing else, (and not for God also) by His Grace we will get what we long for. Swami Ramdas of Anand Ashram near Mangalore relates that one of his devotees askett for mukti which was instantly agreed to, but the devotee stepped back and said "Not yet"! We are not willing to give up worldly pleasures but want God realization at the same time. Both cannot co-exist. We have to choose only one.

MAY GOD BLESS.

**ಸಂಪರ್ಕಿಸಿ :**

**ವಧೂ-ವರರ ವಿವರಣೆಗಳಿಗಾಗಿ ನಮ್ಮ ಬಾಂಧವರು ಶ್ರೀಯುತ ಹೆಚ್.ವಿ. ಮುರಳೀಧರ ಅವರನ್ನು ಸಂಪರ್ಕಿಸಬಹುದು.**

**(P. G. Accommodation Available)**

**ದೂ : 9242803829, 9341413319**

## ಶ್ರದ್ಧಾಂಜಲಿ

19.08.09 **ಸುಬ್ಬಲಕ್ಷ್ಮಮ್ಮ, 89 ವರ್ಷ, ಕೌಂಡಿನ್ಯ ಗೋತ್ರ**
ಬೆಂಗಳೂರು (ಸಾಹುಕಾರ ಮಾಜಿ ವೆಂಕಟರಾಮಯ್ಯನವರ ಧರ್ಮಪತ್ನಿ)

09.09.09 **ಹೆಚ್. ಎನ್. ಚಂದ್ರಶೇಖರ, 58 ವರ್ಷ, ವಾಧೂಲಸ ಗೋತ್ರ**
ಮೈಸೂರು (ಮಾಕೋಡು ಹೆಚ್.ವಿ. ನರಸಿಂಹಯ್ಯ ಮತ್ತು ಶ್ರೀಮತಿ ಪಾರ್ವತಮ್ಮ ಅವರ ಪುತ್ರ)

ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ಭರಿಸಲು ಧೈರ್ಯ, ಸ್ಥೈರ್ಯಗಳನ್ನು ಭಗವಂತನು ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.

## ಬೆಂಗಳೂರು ಸಂಕೇತಿ ಮಹಿಳಾ ಸಮಾಜ ಟ್ರಸ್ಟ್ (ರಿ.)

ದಿನಾಂಕ 09.05.09ರಂದು ಆದರ್ಶ ವನಿತಾ ಸಮಾಜದಲ್ಲಿ ಶ್ರೀಮತಿ ಅನುರಾಧಾ ಅವರಿಂದ ''ಜೋಳದ ರೊಟ್ಟಿ ಮತ್ತು ಬದನೆಕಾಯಿ ಎಣ್ಣೆಗಾಯಿ'' ಮಾಡುವ ವಿಧಾನದ ಪ್ರಾತ್ಯಕ್ಷಿಕೆ ನಡೆಯಿತು. ಅಂದಿನ ಆತಿಥೇಯರು ಶ್ರೀಮತಿಯರಾದ ಅನುಸೂಯಾ. ಎಂ., ಪ್ರತಿಭಾ ದೀಕ್ಷಿತ್, ಭಾಗ್ಯ ಅನಂತ್, ಮಾಲತಿ. ಕೆ. ಎಸ್., ರಮಾ ನಾಗರಾಜ, ಸಾವಿತ್ರಿ ಅನಂತನಾರಾಯಣ್, ಮಂಗಳಾ, ಸ್ವರ್ಣ. ಎಸ್. ಎಂ., ಶೋಭಾ ಪೃಥ್ವೀರಾಜ್, ಶಾರದಾರಾವ್ ಮತ್ತು ಉಷಾ ಶ್ರೀನಾಥ.

27.06.09ರಂದು ಆದರ್ಶ ವನಿತಾ ಸಮಾಜದಲ್ಲಿ ಸದಸ್ಯೆಯರಿಗೆ ಆಟಗಳು. ಒಟ್ಟು 3 ಆಟಗಳನ್ನು ಆಡಿಸಲಾಯಿತು.

ನಮ್ಮ ಟ್ರಸ್ಟ್‌ಗೆ '80ಜಿ' ಅನುಕೂಲ ಸಿಕ್ಕಿದೆ. ಅಂದರೆ ನಮಗೆ ಡೊನೇಷನ್ ಕೊಡುವವರಿಗೆ, ತೆರಿಗೆ ವಿನಾಯಿತಿ ದೊರೆಯುತ್ತದೆ. ಈ ಅನುಕೂಲವನ್ನು ನಮ್ಮ ಬಾಂಧವರು ಉಪಯೋಗಿಸಿಕೊಂಡರೆ **''ನಿಮಗೊಂದು ಅನುಕೂಲ, ನಮಗೊಂದು ಸಹಾಯ.''** ಮೂರೂ ಆಟಗಳ ವಿಜೇತರ ಪಟ್ಟಿ ಇಲ್ಲಿದೆ. ಇದರ ಬಹುಮಾನಗಳನ್ನು ಮುಂದಿನ ತಿಂಗಳ ಸರ್ವ ಸದಸ್ಯರ ಸಭೆಯಲ್ಲಿ ನೀಡಲಾಗುವುದು.

ಶ್ರೀಮತಿ ಶ್ರೀದೇವಿಯವರ ಮಗಳು ಕು|| ಗಾಯಿತ್ರಿಯ ವಿದ್ಯಾಭ್ಯಾಸಕ್ಕಾಗಿ ರೂ. 6,400ರ ಸಹಾಯ ಕೋರಿ ಅರ್ಜಿ ಬಂದಿತ್ತು, ಇವರಿಗೆ ಟ್ರಸ್ಟ್ ರೂ. 2,500 ನೀಡಿತು. ಆದರೆ ಉಳಿದ 3,900 ರೂ.ಗಳನ್ನು ಡಾ|| ಸ್ವರ್ಣಗೌರಿಯವರು ನೀಡಿದರು. ಅವರಿಗೆ ಟ್ರಸ್ಟ್ ಧನ್ಯವಾದ ತಿಳಿಸಿತು.

ಅಂದಿನ ಆತಿಥೇಯರು ಶ್ರೀಮತಿಯರಾದ ಸುವರ್ಣ. ಕೆ., ವನಜಾ. ಆರ್., ಉಷಾ. ಎನ್., ಆಶಾ. ಎ., ರತ್ನಾ ರಾವ್, ಉಮಾ ಮಂಜುನಾಥ, ರಮಾಮಣಿ ಅವರುಗಳು.

| ಆಟಗಳು : | ಪಾಸಿಂಗ್ ದಿ ಪಾರ್ಸೆಲ್ | ದೇವರು-ದೇವಸ್ಥಾನ | 'ಟಿ'ಗಳ ಸಡಗರ |
|---|---|---|---|
| 1ನೇ ಬಹುಮಾನ | ಶಾಂತಾ ನಾಗರಾಜ್ | ಗೀತಾಮೂರ್ತಿ | ಕೃಪಾನಂದಕುಮಾರ್ |
| 2ನೇ ಬಹುಮಾನ | ಎಸ್.ವಿ.ಮನೋನ್ಮಣಿ | ಸುಜಯಾ | ಗಾಯಿತ್ರೀ ರಾವ್ |
| 3ನೇ ಬಹುಮಾನ | ಮೀರಾ ಸುಬ್ರಾಯ | ಆಶಾ ಅನಂತ್ | ಸುಕನ್ಯಾ ಮೂರ್ತಿ |

ವಿಜೇತರಿಗೆ ಅಭಿನಂದನೆಗಳು

ರು. ಕೃ ಗೀತಾಮಣಿ
ಮ್ಯಾನೇಜಿಂಗ್ ಟ್ರಸ್ಟೀ
ದೂ : 26695657





## ವಾರ್ತಾ ನಿಧಿ

ಸಂಘದ ಸದಸ್ಯರ ನಡುವೆ ಮುಖ್ಯಸಂಪರ್ಕ ಸೇತುವೆಯಾಗಿರುವ ಸಂಘದ ಚಟುವಟಿಕೆಗಳ ಮುಖವಾಣಿಯಾಗಿರುವ ಬಾಂಧವರ ಪ್ರತಿಭೆಗಳಿಗೆ ಒಂದು ಕನ್ನಡಿಯಂತಿರುವ ನಿಮ್ಮ 'ಸಂಕೇತಿ ವಾರ್ತಾ'ವನ್ನು ಸದೃಢಗೊಳಿಸಿ, ಗಟ್ಟಿಯಾಗಿ ತನ್ನ ಕಾಲಮೇಲೆ ನಿಲ್ಲುವಂತೆ ಮಾಡುವ ಹೊಣೆ ನಮ್ಮ-ನಿಮ್ಮೆಲ್ಲರ ಮೇಲಿದೆ. ಈ ನಿಟ್ಟಿನಲ್ಲಿ ಬಾಂಧವರಿಂದ ಉದಾರ ಕೊಡುಗೆಗಳನ್ನು ನಿರೀಕ್ಷಿಸಲಾಗಿದೆ. ಮಾನ್ಯ ಬಾಂಧವರು ತಮ್ಮ ಉದಾರ ಮನಸ್ಸಿನ ಕೊಡುಗೆಗಳನ್ನು ಅಧಿಕ ಸಂಖ್ಯೆಯಲ್ಲಿ ನೀಡಿ ಈ ಔಚಿತ್ಯಪೂರ್ಣ ಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಕೋರುತ್ತೇವೆ. ಎರಡು ಪ್ರಕಾರದ ದಾನಿಗಳನ್ನು ಗುರುತಿಸಲಾಗುವುದು.

**ರೂ. 5,000/- ಕೊಡುಗೆ ನೀಡುವವರು**
**ಮಹಾಪೋಷಕರು**

**ರೂ. 1,000/- ಕೊಡುಗೆ ನೀಡುವವರು**
**ಪೋಷಕರು**

ದಾನಿಗಳ ಹೆಸರುಗಳನ್ನು ಪ್ರತಿ ತಿಂಗಳೂ 'ವಾರ್ತಾ'ದಲ್ಲಿ ಪ್ರಕಟಿಸಲಾಗುವುದು.